ಪ್ರಶ್ನೆ. ಅದು ಮುಂದಕ್ಕೆ ಹೋಯಿತು. ಯಾವ ಪಕ್ಷದ ಸದಸ್ಯರೇ ಆಗಿರಲಿ, ಸದಸ್ಯರ ಹಕ್ಕಿನ ಚಲಾವಣೆ ಪ್ರಶ್ನೆ ಬರುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರದಿಂದ ಸೌಜನ್ಯತೆಯ ಮಾತು ಬರಲಿಲ್ಲ. ಮಾನ್ಯ ನಜೀರ್‌ಸಾಬ್‌ರವರು ಇರಬಹುದು ಅಥವಾ ಪ್ರೊಫೆಸರ್ ಲಕ್ಷ್ಮೀಸಾಗರ್‌ರವರು ಇರಬಹುದು. ಉತ್ತರಗಳು ಬರುವುದಕ್ಕೆ ತಡವಾಗಿದೆ, ಅದಕ್ಕಾಗಿ ವಿಷಾಧಿಸುತ್ತೇವೆ ಎಂದು ಸೌಜನ್ಯಯುತವಾದ ಒಂದು ಮಾತು ಕೂಡ ಬರದೇ ಇರತಕ್ಕಂಥ ಸರ್ಕಾರಕ್ಕೆ ನೀವು ಭೀಮಾರಿ ಹಾಕದೇ ಇದ್ದೀರಲ್ಲಾ, ನಾವು ಹೇಗೆ ತಡೆದುಕೊಳ್ಳಬೇಕು ? ತಮ್ಮಿಂದ ನಮ್ಮ ಹಿತರಕ್ಷಣೆ ಆಗಬೇಕು. ಒಂದು ಮಾತನ್ನು ಹೇಳುತ್ತೇನೆ. ಯಾವ ಯಾವ ಪ್ರಶ್ನೆಗಳನ್ನು ಮುಂದಕ್ಕೆ ಹಾಕಿದಿರಿ ಅವುಗಳನ್ನು ಈ ಸಿಟ್ಟಿಂಗ್ ಮುಗಿಯುವುದರೊಳಗೆ ತಂದು ಉತ್ತರಗಳನ್ನು ಒದಗಿಸಿ.

ಅಧ್ಯಕ್ಷರು.—ನಾನೂ ಹೇಳುತ್ತಿದ್ದೇನೆ ಅವರೂ ಅಷ್ಯೂರೆನ್ಸ್ ಕೊಟ್ಟಿದ್ದಾರೆ ಪ್ರಯತ್ನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ನಾವೂ ನೀವೂ ಮಾಡುವುದಲ್ಲ. ನೀವು ತರಿಸುವ ಹಾಗಿದ್ದರೆ ನಾವೇಕೆ ಪ್ರಶ್ನೆ ಹಾಕಬೇಕಿತ್ತು.

ಸೈಟಿಂಗಳನ್ನು ಹಂಚುವ ಬಗ್ಗೆ

೫೬(೧೫೬) ಶ್ರೀ ಗೋಪಾಲ ಮುಕುಂದ ಕಾನಡೆ (ಶಿರಸಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೫-೮೬ರಲ್ಲಿ ಳನೇ ದರ್ಜೆಯ ಹರಿಜನ ಸರ್ಕಾರಿ ನೌಕರರಿಗೆ ಕಡಿಮೆ ಬೆಲೆಯಲ್ಲಿ ನಿವೇಶನ ಕೊಡುವ ಬಗ್ಗೆ ಸರ್ಕಾರದವರು ತೀರ್ಮಾನ ತೆಗೆದುಕೊಂಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಆ ಮೇರೆಗೆ ಈ ವರೆವಿಗೂ ಎಷ್ಟು ಜನರಿಗೆ ನಿವೇಶನಗಳನ್ನು ಹಂಚಲಾಗಿದೆ ?

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಳನೇ ದರ್ಜೆ ಸರ್ಕಾರಿ ನೌಕರರಿಗೆ ನಿವೇಶನ ಹಂಚಿಕೆಯ ಬಗ್ಗೆ ರಿಯಾಯ್ತಿ ಕೊಡುವ ವಿಚಾರದಲ್ಲಿ ೧೯೮೫-೮೬ ರಲ್ಲಿ ಯಾವುದೇ ನಿರ್ಣಯವನ್ನು ಕೈಗೊಂಡಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಾಲ್ಕನೇ ದರ್ಜೆಯ ಹರಿಜನ ಗಿರಿಜನ ನೌಕರರಿಗೆ ಸೈಟ್ ಕೊಡಬೇಕೆಂದು ತೀರ್ಮಾನವನ್ನು ಮಾಡಿದ್ದೀರಾ ಎಂದು ಪ್ರಶ್ನೆ ಕೇಳಿದೆ. ಅವರು ಎಲ್ಲಾ ನಾಲ್ಕನೇ ದರ್ಜೆಯ ನೌಕರರನ್ನು ಸೇರಿಸಿ ಹೇಳುತ್ತಿದ್ದಾರೆ. ಇದನ್ನು ಇನ್ನು ಮುಂದಾದರೂ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮಿಸಾಗರ್.—ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಜ್ಞೆ ದಿನಾಂಕ ೧೮-೮-೮೪ರ ಪ್ರಕಾರ ಅವರು ನಿಯಮಾವಳಿಗಳನ್ನು ಮಾಡಿಕೊಂಡಿದ್ದಾರೆ. ಆ ನಿಯಮಾವಳಿ ಪ್ರಕಾರ ಹರಿಜನ ನಿಮ್ನವರ್ಗದವರಿಗೆ ಸೇರಿದಂತಹವರಿಗೆ ಒಟ್ಟು ವಿಲೇವಾರಿ ಮಾಡತಕ್ಕಂತಹ ಖಾಲಿ ನಿವೇಶನಗಳಲ್ಲಿ ಶೇಕಡ ೧೩ ರಷ್ಟನ್ನು ಕೊಡಬೇಕೆಂದು ಇದೆ. ಮಾನ್ಯ ಕಾನಡೆಯವರು ನಾಲ್ಕನೆದರ್ಜೆ ಹರಿಜನ ಗಿರಿಜನ ನೌಕರರಿಗೆ ಪ್ರತ್ಯೇಕವಾಗಿ ಏನಾದರೂ ಮಾಡುತ್ತೀರಾ ಎಂದು ಕೇಳಿದರು. ಆ ಗುಂಪಿಗೆ ಸೇರಿದಂತಹ ಜನರಿಗೆ ಅವಕಾಶವಿದೆಯೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಮುಂದಾದರೂ ಮಾಡುತ್ತೀರಾ ಎಂದು ಕೇಳಿದ್ದಾರೆ. ಇದು ಕಾನೂನು ಚೌಕಟ್ಟಿನಲ್ಲಿ ಬರುತ್ತದೆಯೇ ಎನ್ನುವುದನ್ನು ವಿಚಾರ ಮಾಡುತ್ತೇನೆ.

ಬೆಂಗಳೂರು ನಗರದ ಕೊಳಚೆ ಪ್ರದೇಶದ ಬಗ್ಗೆ

೫೭(೨೯೪) ಶ್ರೀ ರಾಜು ಗೌಡ (ಹನ್ನೂರ್).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ನಗರದಲ್ಲಿ ಎಷ್ಟು ಕೊಳಚೆ ಪ್ರದೇಶಗಳಿವೆ?

ಆ) ನಗರದ ಶೇಖಡಾವಾರು ಜನಸಂಖ್ಯೆಗೆ ಹೋಲಿಸಿದಲ್ಲಿ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿರುವವರ ಶೇಖಡಾವಾರು ಪ್ರಮಾಣವೆಷ್ಟು ?

ಇ) ಕೊಳಚೆ ಪ್ರದೇಶಗಳ ಹುಟ್ಟುವಿಕೆಯನ್ನು ತಡೆಗಟ್ಟುವುದರಲ್ಲಿ ಸರ್ಕಾರದವರು ವಿಫಲರಾಗಿರುವುದು ನಿಜವೇ ? ಹಾಗಿದ್ದಲ್ಲಿ ಸದರಿ ಕೊಳಚೆ ಪ್ರದೇಶಗಳ ನಿರ್ಮೂಲನಕ್ಕಾಗಿ ಕೈಗೊಂಡ ಕ್ರಮಗಳೇನು ?

ಪ್ರೊ॥ ಎ.ಲಕ್ಷ್ಮೀಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬೆಂಗಳೂರು ನಗರದಲ್ಲಿ ೨೯೩ ಘೋಷಿತ ಕೊಳಚೆ ಪ್ರದೇಶಗಳಿರುತ್ತವೆ.

ಆ) ಸುಮಾರು ಶೇಕಡ ೧೦.೨ ರಷ್ಟಿರುತ್ತದೆ.

ಇ) (ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಶ್ರೀ ಜಿ. ರಾಜೂಗೌಡ.—ಬೆಂಗಳೂರು ನಗರದಲ್ಲಿ ೨೯೩ ಘೋಷಿತ ಪ್ರದೇಶಗಳಿವೆಯೆಂದು ಹೇಳಿದರು. ಅಘೋಷಿತ ಪ್ರದೇಶ ಎಷ್ಟು ಇದೆ ಹಾಗೂ ೧೯೭೧ರಲ್ಲಿ ಘೋಷಿತ ಪ್ರದೇಶ ಎಷ್ಟು ಇದೆ ? ೧೯೭೧ರ ಜನಗಣತಿ ಪ್ರಕಾರ ಶೇಕಡಾವಾರು ಆ ಕೊಳಚೆ ಪ್ರದೇಶದಲ್ಲಿ ಎಷ್ಟು ಜನ ವಾಸ ಮಾಡುತ್ತಿದ್ದಾರೆ ? ಗಂಟಿಗಟ್ಟಲೆ ಬಡವರ ಬಗ್ಗೆ ಭಾಷಣ ಮಾಡತಕ್ಕಂತಹ ಸರಕಾರ ಎಲ್ಲಾ ನಾಗರೀಕ ಸೌಲಭ್ಯಗಳನ್ನು ಅವರಿಗೆ ಕೊಡತಕ್ಕಂಥಾದ್ದರಲ್ಲಿ ವಿಫಲವಾಗಿದೆ ಅಲ್ಲವೆ ?

ಶ್ರೀ ಎ. ಲಕ್ಷ್ಮೀಸಾಗರ್.—ಘೋಷಿತ ಪ್ರದೇಶಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡಿದ್ದು ಅದರ ವಿವರ ಹೀಗಿದೆ, ೨೯೩ರಲ್ಲಿ ೧೬೫ ಕೊಳಚೆ ನಿರ್ಮೂಲನ ಮಂಡಲಿಯ ಅಧೀನದಲ್ಲಿದೆ, ಅಲ್ಲಿ ೧,೪೫,೩೨೨ ಜನರಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧೀನದಲ್ಲಿ ೬೪ ಕೊಳಚೆ ಪ್ರದೇಶಗಳಿದ್ದು ಅಲ್ಲಿ ೬೩,೫೦೦ ಜನ ವಾಸ ಮಾಡುತ್ತಿದ್ದಾರೆ. ಬೆಂಗಳೂರು ನಗರಸಭೆ ಅಧೀನದಲ್ಲಿ ೬೪ ಕೊಳಚೆ ಪ್ರದೇಶಗಳಿದ್ದು ಸುಮಾರು ೧ ಲಕ್ಷ ೪೦,೦೦೦ ಜನ ವಾಸ ಮಾಡುತ್ತಿದ್ದಾರೆ. ಅಘೋಷಿತ ಪ್ರದೇಶ ಎಷ್ಟು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದರ ಬಗ್ಗೆ ಲೆಕ್ಕ ಹಾಕಿಲಪಾದುದರಿಂದ ಅದರ ಬಗ್ಗೆ ಆಂಕಿ ಸಂಖ್ಯೆ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಿ. ರಾಜೂಗೌಡ.—ಕೊಳಚೆ ಪ್ರದೇಶಗಳ ಹುಟ್ಟುವಿಕೆಯನ್ನು ತಡೆಗಟ್ಟುವುದರಲ್ಲಿ ಸರ್ಕಾರ ವಿಫಲವಾಗಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಇಲ್ಲವೆಂದು ಉತ್ತರದಲ್ಲಿ ಹೇಳಿದ್ದೀರಿ. ೧೯೭೧ನೇ ಇಸವಿಯ ಜನಸಂಖ್ಯೆಗನುಗುಣವಾಗಿ ಕೊಳಚೆ ಪ್ರದೇಶದಲ್ಲಿ ಶೇಕಡ ಎಷ್ಟು ಜನ ವಾಸ ಮಾಡುತ್ತಿದ್ದರು. ಆ ಅವಧಿಯಲ್ಲಿ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟಿತ್ತು ? ಇವತ್ತು ಎಷ್ಟು ಇದೆ ?

ಶ್ರೀ ಎ. ಲಕ್ಷ್ಮೀಸಾಗರ್.—೧೯೭೧ನೇ ಇಸವಿಯಲ್ಲಿ ಎಷ್ಟು ಜನರಿದ್ದರು, ೧೯೮೧ನೇ ಇಸವಿಯಲ್ಲಿ ಎಷ್ಟು ಜನರಿದ್ದಾರೆ ಎಂಬ ಸಂಖ್ಯೆ ಇಲ್ಲ. ಅದನ್ನು ಒದಗಿಸಿಕೊಡುತ್ತೇನೆ ಆ ಅಂಶ ನನ್ನ ಹತ್ತಿರ ಇಲ್ಲ.

ಶ್ರೀ ಜಿ. ರಾಜೂಗೌಡ.—ಬೆಂಗಳೂರು ಗ್ರೀನ್ ಬೆಲ್ಟ್ ಬಿಟ್ಟು ಹೊರಗಡೆ ಬೆಂಗಳೂರು ಉಪ ನಗರ ನಿರ್ಮಾಣ ಮಾಡಿ ಅಲ್ಲಿ ಈ ಜನಗಳಿಗೆ ಪುನರ್ ವಸತಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ನಾವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಕೊಳಚೆ ನಿವಾಸಿಗಳು ೧೦–೧೫ ವರ್ಷಗಳಿಂದ ವಾಸಮಾಡುತ್ತಿರತಕ್ಕಂತಹ ಪ್ರದೇಶದಿಂದ ಬಿಡಿಸಿ ಬೇರೆ ನಿರ್ದಿಷ್ಟವಾದಂತಹ ಜಾಗಗಳಿಗೆ ಅವರನ್ನು ವರ್ಗಾಯಿಸತಕ್ಕಂತಹ ಸಂದರ್ಭದಲ್ಲಿ ಹೊಸ ಜಾಗಗಳಲ್ಲಿ ಅವರಿಗೆ ಖಾಯಂ ನೆಲವನ್ನೂ ಹಾಗೂ ಇತರ ಪೌರ ಸೌಲಭ್ಯವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಹಂತಹಂತವಾಗಿ ಮಾಡತಕ್ಕಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ.

ಶ್ರೀ ಜಿ. ರಾಜೂಗೌಡ.—ಮೊದಲನೇ ಹಂತ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಕೆಲಸ ನಡೆದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೊಳಚೆ ಪ್ರದೇಶವನ್ನು ತಡೆಗಟ್ಟುವುದರಲ್ಲಿ ಸಹಕಾರ ವಿಫಲವಾಗಿದೆ. ಹಂತ ಹಂತವಾಗಿ ಅವರನ್ನು ಬೇರೆ ಕಡೆಗೆ ವರ್ಗಾಯಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇವೊತ್ತು ಪತ್ರಿಕೆಯಲ್ಲಿ ಈ ವಿಚಾರ ಬಂದಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡುವುದಕ್ಕೆ ಹೊರಟಿದ್ದಾರೆ. ಮನೆಗಳನ್ನು ಕೆಡವಿ, ಅವರಿಗೆ ಸ್ಥಳ ತೋರಿಸದೆ ಇದನ್ನು ನಿರ್ಮೂಲನ ಮಾಡುವಂತಹ ನಿದರ್ಶನಗಳು ಇವತ್ತಿನ, ಹಾಗೂ ನಿನ್ನೆಯ ಪತ್ರಿಕೆಯಲ್ಲಿ ಬಂದಿವೆ. ಅದನ್ನು ತಡೆಗಟ್ಟಿ ಅದಕ್ಕೆ ಬದಲು ಬೇರೆ ಕಡೆ ಅವರಿಗೆ ಜಾಗವನ್ನು ಕೊಟ್ಟು ಸರಿಯಾದಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹೊಸದಾಗಿ ಕೊಳಚೆ ಪ್ರದೇಶಗಳು ತಲೆ ಎತ್ತುವುದಕ್ಕೆ ಬಿಡುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ನಾನೂ ಕೂಡ ಹೇಳಿದ್ದೇನೆ. ೧೦-೧೫ ವರ್ಷಗಳಿಂದ ಖಾಯಂ ಆಗಿ ಕೊಳಚೆ ಪ್ರದೇಶಗಳಲ್ಲಿರತಕ್ಕಂತಹವರನ್ನು ಆ ಸ್ಥಳದಿಂದ ಬಿಡಿಸುವ ಸಮಯದಲ್ಲಿ ಅವರಿಗೆ ಬೇರೆ ಜಾಗಗಳನ್ನು ಕೊಟ್ಟು ಆ ಜಾಗದಿಂದ ಅವರನ್ನು ಬಿಡಿಸುತ್ತೇವೆ. ಈ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಕೆಲವು ಕಡೆ ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಒಕ್ಕಲಿಗರ ಸಂಘದ ಎದುರುಗಡೆ ಬುಟ್ಟಿಗಳನ್ನು ಮಾರುತ್ತಿದ್ದರು. ಈಗ ಎರಡು ವರ್ಷದಿಂದ ಅಲ್ಲಿ ಆಗಿರುವಷ್ಟು ಕೊಳಚೆ ಇನ್ನು ಎಲ್ಲೂ ಇಲ್ಲ. ನೀವು ಆ ಕಡೆ ಓಡಾಡಿಯೇ ಇಲ್ಲವೇ ? ಮಾನ್ಯ ದೇವೇಗೌಡರು ಒಕ್ಕಲಿಗರ ಸ್ಥಳದಲ್ಲಾಗುತ್ತಿರುವ ಅನಾಹುತ, ನಿಮಗಾಗಲೀ ಇಲ್ಲವೇ ಕಾರ್ಪೊರೇಷನ್‌ಗಾಗಲೀ ಗಮನಕ್ಕೆ ಬಂದಿಲ್ಲವೇ ? ಅದು ಘೋಷಿತ ಪ್ರದೇಶವೋ, ಅಘೋಷಿತ ಪ್ರದೇಶವೋ ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಇಂತಹ ಕೊಳಚೆ ಪ್ರದೇಶಗಳಿಂದ ಸುತ್ತ ಮುತ್ತಲಿನ ಜನರಿಗೆ ತೊಂದರೆಯಾಗುತ್ತದೆನ್ನುವುದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಆದರೆ ಅವರನ್ನು ಸ್ಥಳಾಂತರ ಮಾಡಬೇಕಾದರೆ ಬೇರೆ ಜಾಗಗಳನ್ನು ಗೊತ್ತುಮಾಡಿ ಅವರನ್ನು ಆ ಜಾಗಕ್ಕೆ ಕಳುಹಿಸತಕ್ಕಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಇದು ನಿನ್ನೆ ಮೊನ್ನೆ ಬಂದದ್ದು ಅಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಪ್ರಶ್ನೋತ್ತರಕ್ಕೆ ಎಷ್ಟು ಸಮಯ ಕೊಡಬೇಕು ? ಸಾಧ್ಯವಿಲ್ಲ ತಾವು ದಯವಿಟ್ಟು ಕುಳಿತುಕೊಳ್ಳಿ.

ಉಳ್ಳಾಲ ಕ್ಷೇತ್ರದಲ್ಲಿ ನಳದ ನೀರಿನ ಕೆಲಸ

೫೮ (೮೫) ಶ್ರೀ ಬಿ. ಎ. ಇದಿನಬ್ಬ (ಉಳ್ಳಾಲ).—ಮಾನ್ಯ ಗ್ರಾಮಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಉಳ್ಳಾಲ, ಕೋಟೆಕಾರು, ಬಜಾಲ್ ಈ ಮೂರು ನಳದ ನೀರಿನ ಯೋಜನೆ ಮಂಜೂರಾತಿ ಆಗಿದ್ದು ಇವುಗಳ ಕೆಲಸ ಈಗ ಯಾವ ಹಂತದಲ್ಲಿದೆ ?

ಆ) ಈ ಕೆಲಸಗಳು ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆದಷ್ಟು ಶೀಘ್ರವಾಗಿ ಈ ಕೆಲಸಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು).—

ಅ)	ಗ್ರಾಮ ಉಳ್ಳಾಲ	ಮಂಜೂರಾದ ವರ್ಷ ೧೯೮೫/೮೬	ಹಂತ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದ್ದು ತಾಂತ್ರಿಕ ಮಂಜೂರಾತಿ ನೀಡಿ ಕಾರ್ಯಗತಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.